# ದೇಶಕೊಬ್ಬನೆ ಜುಂಜಪ್ಪ

ಜುಂಜಪ್ಪನ ಕಾವ್ಯ ಮಧ್ಯಕರ್ನಾಟಕದ ಪ್ರಮುಖ ಬುಡಕಟ್ಟು ಸಮುದಾಯವಾದ ಕಾಡುಗೊಲ್ಲರ ಮೂಲನೆಲೆಯೆನಿಸಿರುವ ಕೊಂಕಿ ಜರಮಲೆಯ ಚಿತ್ರಯ್ಯನ ಹಟ್ಟಿಯಿಂದ ಆರಂಭಗೊಳ್ಳುತ್ತದೆ. ಅಲ್ಲಿಂದ ಬಯಲು ಸೀಮೆಯ ಹಿರಿಯೂರು, ಕಳುವೊರಳ್ಳಿ, ಸಿರಾ, ಮದಗದಬೆಟ್ಟ, ಪುರಸಕ್ಕನ ಕೆರೆ, ಹಾಗಲವಾಡಿ, ಚೇಳೂರು ಹಾಗೂ ಜುಂಜಪ್ಪನ ಸಮಾಧಿ ಇರುವ 'ಜುಂಜಪ್ಪನ ಗುಡ್ಡೆ'ವರೆಗಿನ ತೆವರು ತಿಟ್ಟುಗಳನ್ನು ಹಾದು ಮಹಾನದಿಯಂತೆ ಹರಿಯುತ್ತದೆ. ಜುಂಜಪ್ಪನ ಕಾವ್ಯ ಮೂರು ತಲೆಮಾರುಗಳ ಕಥನವಾದರೂ, ಅಂತಿಮವಾಗಿ ಜುಂಜಪ್ಪನ ಬದುಕಿನ ದುರಂತ, ದಾಯಾದಿ ಮತ್ಸರ, ದ್ವೇಷ, ಪ್ರತೀಕಾರ ಹಾಗೂ ಪಶುಸಂಗೋಪನೆಗಳನ್ನು ಒಳಗೊಂಡು, ಅಂತಿಮವಾಗಿ ಒಂದು ರುದ್ರಕಥನವಾಗಿ ಅಂತ್ಯಕಾಣುತ್ತದೆ. ಜುಂಜಪ್ಪನೇ ಕೇಂದ್ರವಾಗಿರುವ ಈ ಕಾವ್ಯ ಪ್ರಾಚೀನ ಕಾಡುಗೊಲ್ಲ ಸಮುದಾಯದ ಸಂಸ್ಕೃತಿಯ ಮನೋಕೋಶದಿಂದ ಸೃಷ್ಟಿಯಾಗಿದೆ. ಇದೊಂದು ಕಾಡುಗೊಲ್ಲರ ಸ್ವಭಾವವನ್ನು ತಾಳಿನಿಂದ ತುದಿತನಕ ಒಳಗೊಂಡಿರುವ ಕಾವ್ಯಾತ್ಮಕ ಅಭಿವ್ಯಕ್ತಿಯೂ ಹೌದು. ಸರಳ ಜೀವನ, ಪಶುಸಂಗೋಪನೆ ಹಾಗೂ ಪ್ರಕೃತಿಯನ್ನು ಅದು ಹೇಗಿದೆಯೋ ಹಾಗೆ ಗೌರವಿಸುವುದು ಇವರ ಬದುಕಿನ ತಿರುಳು. ಆದ್ದರಿಂದ ಅಸಮ ಸಮಾಜದ ವಿರುದ್ಧ ಬಂಡೇಳುವ ಪ್ರವೃತ್ತಿ ಇವರದ್ದಲ್ಲ! ಈ ಅರ್ಥದಲ್ಲಿ 'ಜುಂಜಪ್ಪನ ಕಾವ್ಯ' ಕನ್ನಡ ಬುಡಕಟ್ಟು ಸಂಸ್ಕೃತಿಯ ಮೌಖಿಕ ಇತಿಹಾಸದ ಪ್ರತಿನಿಧಿಯೂ ಆಗಿದೆ.

ಕಾಡುಗೊಲ್ಲರ ಕುಲಕಥನದಿಂದ ಮೊದಲುಗೊಂಡು, ಅವರ ಸಂಘರ್ಷಮಯವಾದ ಅಲೆಮಾರಿ ಜೀವನದ ವಿವಿಧ ಘಟ್ಟಗಳನ್ನು ಹಾದು ಒಂದು ನಿರ್ದಿಷ್ಟ ಪ್ರದೇಶದಲ್ಲಿ ನೆಲೆಗೊಳ್ಳುವ ಹಾಗೂ ಕೃಷಿಯೆಡೆಗೆ ಹೊರಳುವ ಸ್ಥಿತ್ಯಂತರದವರೆಗೆ ಹಬ್ಬಿರುವ ಅವರ ಬದುಕಿನ ವಿಕಾಸದ ಸತ್ಯಪಥವನ್ನು ಜುಂಜಪ್ಪನ ಕಾವ್ಯ ತೋರಿಸುತ್ತದೆ. ದಾಯಾದಿ ಮಾತ್ರ್ಯ, ಪಾಳೇಗಾರಿಕೆ ಸಮುದಾಯಗಳ ಆಕ್ರಮಣವನ್ನು ಎದುರಿಸುತ್ತಾ, ತಮ್ಮ ಪಾರಂಪರಿಕ ವೃತ್ತಿಯಾದ ಪಶುಸಂಗೋಪನೆಗಾಗಿ ತನ್ನ ಬದುಕನ್ನೇ ಮುಡಿಪಾಗಿಟ್ಟ ಜುಂಜಪ್ಪ ಕೊನೆಗೆ ತನ್ನ ಸೋದರಮಾವಂದಿರ ಕುತಂತ್ರಕ್ಕೆ ಬಲಿಯಾಗಿ ಅವರಿಂದಲೇ ಹತನಾಗುತ್ತಾನೆ. ಹೀಗೆ ಜುಂಜಪ್ಪ ತನ್ನ ಸಾಮಾನ್ಯ ವ್ಯಕ್ತಿತ್ವದ ಮಿತಿಯನ್ನು ದಾಟುತ್ತಲೇ ಒಂದು ಸಮುದಾಯದ ದೈವವಾಗಿ ರೂಪುಗೊಳ್ಳುತ್ತಾನೆ. ಕಾಡುಗೊಲ್ಲರಲ್ಲಿ ತಮ್ಮ ಸಮುದಾಯಕ್ಕಾಗಿ ಹೋರಾಡಿ ಮಡಿದ ನೂರಾರು ಜನರಿದ್ದಾರೆ. ಇವರನ್ನೆಲ್ಲಾ 'ವೀರಗಾರರು' ಎಂದು ಕರೆಯುತ್ತಾರೆ. ಕಾಡುಗೊಲ್ಲರ ನಿಜವಾದ ದೈವಗಳೆಂದರೆ ಈ ವೀರಗಾರರೆ. ಇಂತಹ ವೀರಗಾರರನ್ನು ಕುರಿತು ನೂರಾರು ಕಾವ್ಯಗಳು ಕಾಡುಗೊಲ್ಲರಲ್ಲಿವೆ. ಆದರೆ ಅವರಲ್ಲಿ ಜುಂಜಪ್ಪನಷ್ಟು ಪ್ರಖ್ಯಾತನಾದ ವೀರಗಾರ ಮತ್ತೊಬ್ಬನಿಲ್ಲ! ಹೀಗೆ ಕಾಡುಗೊಲ್ಲ ಸಮುದಾಯವು ಜುಂಜಪ್ಪನನ್ನು ತಮ್ಮ ನಿತ್ಯ ಬದುಕಿನ ಒಂದು ಭಾಗವಾಗಿಯೇ ಆರಾಧಿಸುತ್ತದೆ. ಅವನನ್ನು ಕುರಿತು ದೀರ್ಘ ಕಾವ್ಯ, ಕೋಲಾಟದ ಪದಗಳು, ಗದ್ಯ ಕಾವ್ಯ, ತ್ರಿಪದಿಗಳು ಹೀಗೆ ವೈವಿಧ್ಯಮಯವಾದ ಅಭಿವ್ಯಕ್ತಿಗಳು ಮಧ್ಯ ಕರ್ನಾಟಕದಲ್ಲಿ ಹೆಜ್ಜೆಗೊಂದರಂತೆ ದೊರೆಯುತ್ತವೆ.

ಜುಂಜಪ್ಪನ ಕಾವ್ಯದಲ್ಲಿ ಸದ್ಗುಣ, ಸರಳತೆ ಹಾಗೂ ತನ್ನ ಸಂಸ್ಕೃತಿಯೊಳಗೆ ಹೊರಗಿನದನ್ನು ಬಿಟ್ಟುಕೊಳ್ಳದಿರುವುದು ಮತ್ತು ತನ್ನೊಳಗೆ ಇರುವುದನ್ನು ಯಾರಿಗೂ ಕೊಡದೇ ಇರುವುದು! ಇವು ಕಾಡುಗೊಲ್ಲರ ಸ್ವಾಭಾವಿಕ ಗುಣಗಳಾಗಿವೆ. ಇವರ ಕಾವ್ಯವೂ ಪ್ರಕೃತಿಯ ವಿವರಗಳೊಂದಿಗೆ ಮಂದ್ರವಾಗಿ ಹರಿಯುವ ಸಂಗೀತದಂತೆ. ಮಧ್ಯಕಾಲೀನ ಕರ್ನಾಟಕದಲ್ಲಿ ಕಂಡುಬರುವ ಸಣ್ಣ ಸಣ್ಣ ಪಾಳೆಪಟ್ಟುಗಳ ಪುಂಡಾಟಿಕೆಗೆ ದುರ್ಬಲ ಸಮುದಾಯಗಳು ಬಲಿಯಾಗುವ ಚಾರಿತ್ರಿಕ ವಿದ್ಯಮಾನಗಳನ್ನೂ ಈ ಕಾವ್ಯ ಮನಗಾಣಿಸುತ್ತದೆ. ಜುಂಜಪ್ಪ ತನ್ನ ಪಶುಸಂಗೋಪನೆಗೆ ಹುಲ್ಲುಗಾವಲಿನಿಂದ ಹುಲ್ಲುಗಾವಲುಗಳಿಗೆ ಅಲೆಯುತ್ತಾನೆ. ಈ ಹುಲ್ಲುಗಾವಲುಗಳೆಲ್ಲ ಪಾಳೇಗಾರರ ಅಧೀನದಲ್ಲಿರುತ್ತವೆ. ಹೀಗಾಗಿ ಅವರೊಡನೆ ಕಾದಾಡುವುದು ಅವನಿಗೆ ಅನಿವಾರ್ಯವಾಗುತ್ತದೆ. ಇಂತಹ ಕಾದಾಟಗಳಲ್ಲಿ ಜುಂಜಪ್ಪ ಕೆಲವು ಪಾಳೇಗಾರ ನಾಯಕರನ್ನು ಸೋಲಿಸುತ್ತಾನೆ. ಮೂಲತಃ ಕಾಡುಗೊಲ್ಲರು ಆಳುವ ವರ್ಗವಲ್ಲ. ಯಾವುದನ್ನೂ ಅಧೀನರನ್ನಾಗಿಟ್ಟುಕೊಳ್ಳುವುದು ಅವರ ಸ್ವಭಾವವಲ್ಲ! ಹೀಗಾಗಿ ಜುಂಜಪ್ಪ ತಾನು ವಶಪಡಿಸಿಕೊಂಡಿದ್ದ ಪಾಳೆಪಟ್ಟುಗಳನ್ನು ಅವರಿಗೇ ಮರಳಿಸುತ್ತಾನೆ. ಆದರೆ ಹೀಗೆ ಮರಳಿಸುವಾಗ ಕೆಲವು ನಿಬಂಧನೆಗಳನ್ನೂ ಹೇರುತ್ತಾನೆ 'ಈ ರಾಜ್ಯದಲ್ಲಿ ಬಡವ ಬಲ್ಲಿದರನ್ನು ಒಂದೇ ಸಮನಾಗಿ ಕಾಪಾಡಬೇಕು. ತೆರಿಗೆ ವಸೂಲಿಯನ್ನು ಕಡಿಮೆ ಮಾಡಬೇಕು. ಮನೆ ಇಲ್ಲದವರಿಗೆ ಮನೆ, ಭೂಮಿ ಇಲ್ಲದವರಿಗೆ ಭೂಮಿ, ಅನ್ನವಿಲ್ಲದವರಿಗೆ ಅನ್ನ ಕೊಡಬೇಕು. ಕೈಲಾಗದವರಿಗೆ ಸಹಾಯ ಮಾಡಬೇಕು. ಕೊಡುವುದರಲ್ಲಿಯೂ, ಕೊಳ್ಳುವುದರಲ್ಲಿಯೂ ನ್ಯಾಯವಾಗಿರಬೇಕು' ಎಂದು ಷರಾ ಬರೆಸುತ್ತಾನೆ.

ಜುಂಜಪ್ಪನಿಗಿರುವ ಸಹನೆ, ಔದಾರ್ಯ, ತನಗೆ ಮತ್ತು ತನ್ನ ಸಮುದಾಯಕ್ಕೆ ಕಿರುಕುಳ ಕೊಟ್ಟವರನ್ನು ಮನ್ನಿಸುವ ಅವನ ಕ್ಷಮಾಗುಣ, ಗೋವುಗಳ ಬಗ್ಗೆ ಅವನಿಗಿದ್ದ ಒಲುಮೆ, ತುಡಿತ ಈ ಎಲ್ಲವೂ ಅವನ ವ್ಯಕ್ತಿತ್ವಕ್ಕೆ ದೈವಿಕತೆಯ ಮೆರುಗು ನೀಡಿವೆ. ಈ ಒದಿನ ಜೊತೆಗೆ ಕಾಡುಗೊಲ್ಲ ಸಮುದಾಯದ ಪ್ರಾಚೀನ ಬದುಕಿನ ಸೌಂದರ್ಯವನ್ನು ಇಂದಿನ ನಾಗರಿಕತೆಯ ವಿಕೃತಗಳೊಂದಿಗೆ ಹೋಲಿಸಿ ನೋಡುವ ಸಾಧ್ಯತೆಗಳನ್ನೂ ತಳ್ಳಿಹಾಕುವಂತಿಲ್ಲ! ತತ್ತ್ವಪದಕಾರರಂತೆ ಸಂಸ್ಕೃತ ಭಾಷೆಯ ಸಂವೇದನೆಯಿಂದ ದೂರವಿರುವ ಈ ಕಾವ್ಯ ಕನ್ನಡ ಸೊಲ್ಲಿನ ಬಳಕೆ, ರೂಪಕ ನಿರ್ಮಾಣ ಹಾಗೂ ಕಲಾತ್ಮಕ ಅಭಿವ್ಯಕ್ತಿಯಲ್ಲಿ ಯಾವ ಶಿಷ್ಟ ಕಾವ್ಯಕ್ಕೂ ಕಡಿಮೆಯಿಲ್ಲದಂತೆ ಪ್ರಕಾಶಿಸುತ್ತದೆ.

ಶಿಕ್ಷಣವೇ ಉನ್ನತ ಜ್ಞಾನವಲ್ಲ! ಅನುಭವದಿಂದ ಬರುವ ವಿವೇಕವೇ ಎಲ್ಲ ಜ್ಞಾನಕ್ಕಿಂತ ಮಿಗಿಲು ಎಂಬುದನ್ನು ಕಾಡುಗೊಲ್ಲ ಸಮುದಾಯ ಮತ್ತೆ ಮತ್ತೆ ನಿರೂಪಿಸುತ್ತದೆ. ನಮ್ಮಲ್ಲಿ ಯಾವುದೇ ಒಂದು ಪ್ರದೇಶದ ಮಣ್ಣು, ಹುಲ್ಲು ಮತ್ತು ನೀರಿನ ಗುಣ ಗೊತ್ತಾಗಬೇಕೆಂದರೆ ಗೊಲ್ಲನನ್ನು ಕೇಳು ಎಂದು ಹೇಳುತ್ತಾರೆ. ಮಳೆ, ದಿಕ್ಕು, ಕೃಷಿ, ಆಹಾರ ಪದ್ಧತಿ ಹಾಗೂ ವೈದ್ಯಪದ್ಧತಿಯ ಬಗ್ಗೆ ಅವರಲ್ಲಿರುವ ಲೋಕಜ್ಞಾನ ಅಗಾಧವಾದದ್ದು! ಇದನ್ನೇ ಹಿಂಬಾಲಿಸುವ ಕಾಡುಗೊಲ್ಲ ಸಮುದಾಯದಲ್ಲಿ ಯೋಗಿಗಳು ಹಾಗೂ ಸಂತರ ಪರಂಪರೆಯೇ ಇದೆ. ಇವರ ಅಭಿವ್ಯಕ್ತಿಗಳು ನೂರಾರು ಸಂಖ್ಯೆಯಲ್ಲಿವೆ. ಅವೆಲ್ಲವೂ ಶೋಧವಾಗಬೇಕಿದೆ. ಇಂತಹ ಅಪಾರ ಪ್ರತಿಭೆ ಇರುವ ಕಾಡುಗೊಲ್ಲ ಸಮುದಾಯವು 'ಜನಪದ ತತ್ತ್ವಜ್ಞಾನಿಗಳ ಕಣಜ'.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಯಾವ ಕಲೆಯಲ್ಲೂ ರುಚಿಯೊಂದಿಗೆ ಶುಚಿಯನ್ನು ಕಾಪಾಡಿಕೊಳ್ಳುವುದು ಭಾರತೀಯ ಸಂಪ್ರದಾಯ.
  —ಮಾಸ್ತಿ
- ಅಹಂಕಾರಿ ಮನುಷ್ಯ ಒಂಟಿಯಾಗಿರಬೇಕಾಗುತ್ತದೆ.
  —ಚೆನ್ನವೀರ ಕಣವಿ
- ನೀವು ಲೋಕವನ್ನಾಗಲೀ, ಸಮಾಜವನ್ನಾಗಲೀ, ಪುರೋಹಿತಶಾಹಿಯನ್ನಾಗಲೀ, ಬದಲಾಯಿಸಲು ಪ್ರಯತ್ನಿಸುವ ಅಗತ್ಯ ಖಂಡಿತ ಇಲ್ಲ. ನೀವು ಮತ್ತು ನಿಮ್ಮ ಮನಸ್ಸು ಪರಿವರ್ತನೆ ಆಗದೆ ಏನೂ ಬದಲಾಗುವುದಿಲ್ಲ.
  —ಕುವೆಂಪು
- ಬೇರೆಯವರನ್ನು ತೆಗಳುವುದರಿಂದ ನಿಮ್ಮ ವ್ಯಕ್ತಿತ್ವಕ್ಕೇ ಹೆಚ್ಚು ಕುಂದುಂಟಾಗುತ್ತದೆ.
  —ಶಿವರಾಮ ಕಾರಂತ
- ಅಮೃತವನುಂಬ ಶಿಶುವಿಂಗೆ ವಿಷವನೂಡುವರೆ ಅಯ್ಯಾ.
  —ಅಕ್ಕಮಹಾದೇವಿ
- ಹೊಟ್ಟೆ ತುಂಬಿದವರಿಗೆ ಬೇರೆಯವರು ಕಷ್ಟದಲ್ಲಿದ್ದಾಗ ಮರುಕ ಹುಟ್ಟುವುದೇ?
  —ನಾ. ಕಸ್ತೂರಿ